ಸಿಸಿ ನಂಃ **689/2018**
ಪಿ.ಡಬ್ಲ್ಯೂಃ **2**

ದಿನಾಂಕ **19-02-2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಬಿ.ಎಸ್.ಎಂ ವಕೀಲರಿಂದಃ</u>

ನಾನು 2016 ರಿಂದ ದೂರುದಾರರ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ದೂರುದಾರ ಮತ್ತು ಆರೋಪಿಯ ನಡುವೆ ಆಗಿರುವ ಕರಾರಿನ ಬಗ್ಗೆ ನನಗೆ ಮಾಹಿತಿ ಇದೆ. ಆರೋಪಿ ಅನಕ್ಷರಸ್ಥನಾಗಿರುತ್ತಾನೆ ಎಂದರೆ ಸರಿ. ಆರೋಪಿ ಕಬ್ಬು ಕಟಾವು ಮಾಡಿಕೊಡುವುದಾಗಿ ಕಾರ್ಖಾನೆಗೆ ಬಂದಿಲ್ಲ ಹೊರತು ನಾವೇ ಆರೋಪಿಯ ಹತ್ತಿರ ಹೋಗಿ ಕಾರ್ಮಿಕರನ್ನು ಒದಗಿಸುವಂತೆ ಕೇಳಿದ್ದೆವು ಎಂದರೆ ಸರಿಯಲ್ಲ. ದಿನಾಂಕ 10.08.2016 ರಂದು ಕರಾರು ಪತ್ರ ಮಾಡಿಕೊಂಡು ಆರೋಪಿಗೆ ಅದರಲ್ಲಿನ ಅಂಶಗಳನ್ನು ಓದಿ ತಿಳಿಸದೇ ಅವರ ಸಹಿ ಪಡೆದು ಅವರ ಖಾತೆಗೆ ಹಣ ಪಾವತಿ ಮಾಡುವುದಾಗಿ ಅವರಿಂದ ಚೆಕ್ ಹಾಗೂ ಬ್ಯಾಂಕ್ ಖಾತಾ ಪುಸ್ತಕ ಪಡೆದುಕೊಂಡಿದ್ದೆವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬ್ಯಾಂಕ್ ಪಾಸ್ ಪುಸ್ತಕ ಮಾತ್ರ ಪಡೆದುಕೊಂಡಿದ್ದೆವು ಎಂದು ನುಡಿಯುತ್ತಾರೆ. ನಂತರ ದಿಃ 25.08.2016 ರಂದು ಚೆಕ್ ನಂ.618826 ಚೆಕ್ಕಿನ ಮೂಲಕ ರೂ.2 ಲಕ್ಷ ಹಣವನ್ನು ಆರೋಪಿಯ ಖಾತೆಗೆ ಜಮಾ ಮಾಡಿದ್ದೆವು ಎಂದರೆ ಸರಿ. ಅದೇ ರೀತಿ ದಿನಾಂಕ 30.09.2016 ರಂದು ಚೆಕ್ ನಂ.619171 ರ ಮೂಲಕ ರೂ.1,50,000/- ಹಣವನ್ನು ಆರೋಪಿಯ ಖಾತೆಗೆ ಹಾಕಿದ್ದೆವು ಎಂದರೆ ಸರಿ. ಸದರಿ ಹಣವನ್ನು ಆರೋಪಿ ಬ್ಯಾಂಕಿನಿಂದ ಡ್ರಾ ಮಾಡಿಕೊಂಡು ಬಂದು ನಮ್ಮ ಸಮಕ್ಷಮವೇ 12 ಜೊತೆ ಅಂದರೆ 24 ಜನ ಕಾರ್ಮಿಕರಿಗೆ ಮುಂಗಡವಾಗಿ ಪಾವತಿ ಮಾಡಿದ್ದರು ಎಂದರೆ ಸರಿಯಲ್ಲ. ನಂತರ ಸದರಿ ಎಲ್ಲಾ ರೈತರು ಜೇವರ್ಗಿಯಲ್ಲಿ ನಾವು ಕೊಡುವ ಕೆಲಸಕ್ಕಾಗಿ ಸುಮಾರು 08 ದಿನ ವಾಸವಾಗಿದ್ದು ಕಾದರೂ ಸಹ ಯಾವುದೇ ರೈತರು ನಮ್ಮ ಕಾರ್ಖಾನೆಗೆ ಕಬ್ಬು ಪೂರೈಸಲು ಒಪ್ಪಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ನಾವು ಕೆಲಸ ಕೊಡುತ್ತಿಲ್ಲ ಎಂದು ಆರೋಪಿ ನಮ್ಮನ್ನು ಕೇಳಿದಾಗ ನಾವು ಮುದ್ದೆಬಿಹಾಳಿನ ಬಾಲಾಜಿ ಕಾರ್ಖಾನೆಗೆ ಕಬ್ಬು ಕಟಾವು ಮಾಡಿ ಕಳುಹಿಸುವಂತೆ ಹೇಳಿರುತ್ತೇವೆ ಎಂದರೆ ಸರಿಯಲ್ಲ. ಆ ಪ್ರಕಾರ ರೈತರ ಕಬ್ಬು ಬೆಳೆಯನ್ನು ಆರೋಪಿ ಕಟಾವು ಮಾಡಿ ಬಾಲಾಜಿ ಕಾರ್ಖಾನೆಗೆ ಕಳುಹಿಸಿದ್ದು ಸದರಿ ರೈತರ ಬಿಲ್ಲನ್ನು ಸದರಿ ಫ್ಯಾಕ್ಟರಿಯವರು ನಮ್ಮ ಕಾರ್ಖಾನೆಗೆ ನೀಡಿದ್ದರು ಹಾಗೂ ನಾವು ಅದನ್ನು ರೈತರಿಗೆ ನೀಡಿರುತ್ತೇವೆ ಎಂದರೆ ಸರಿಯಲ್ಲ. ಆ ನಂತರ ಬಿಲ್ ಪಾವತಿ ಮಾಡುವಲ್ಲಿ

ವಿಳಂಬವಾಗಿದ್ದರಿಂದ ಬಾಲಾಜಿ ಕಾರ್ಖಾನೆಗೂ ಸಹ ಕಬ್ಬು ನೀಡಲು ರೈತರು ನಿರಾಕರಿಸಿರುತ್ತಾರೆ ಎಂದರೆ ಸರಿಯಲ್ಲ. ನಾವು ಸರಿಯಾದ ಸಮಯದಲ್ಲಿ ಕೆಲಸ ಕೊಡದೇ ಬಿಲ್ ಪಾವತಿ ಸಹ ಮಾಡದ ಕಾರಣ ಆರೋಪಿಯ ಕಾರ್ಮಿಕರು ಕೆಲಸ ಬಿಟ್ಟು ಹೋಗಿರುತ್ತಾರೆ ಎಂದರೆ ಸರಿಯಲ್ಲ.

2. ನಿಪಿ-2 ರ ಚೆಕ್ಕನ್ನು ನಾವು ಆರೋಪಿಯಿಂದ ಮುಂಚೆಯೇ ಪಡೆದುಕೊಂಡಿದ್ದೆವು ಹಾಗೂ ಆತನಿಗೆ ಅದರ ಬಗ್ಗೆ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ರೂ.4,34,058/- ಹಣ ನೀಡಬೇಕಾಗಿದೆ ಎಂದು ಚೆಕ್ಕನ್ನು ಬ್ಯಾಂಕಿಗೆ ಹಾಜರು ಪಡಿಸಿರುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿ ನಮ್ಮ ನಿರ್ದೇಶನದಂತೆ ಮುದ್ದೆಬಿಹಾಳಿನ ಕಾರ್ಖಾನೆಗೆ ಕಬ್ಬು ಕಟಾವು ಮಾಡಿ ಕಳುಹಿಸಿದ್ದು ಅದರ ಬಿಲ್ಲನ್ನು ಸಹ ನಾವು ಪಾವತಿ ಮಾಡಬೇಕಾಗುತ್ತದೆ ಎಂದರೆ ಸರಿಯಲ್ಲ. ನಾವು ಕೆಲಸ ನೀಡದಿದ್ದಾಗ ಆರೋಪಿಗೆ ಆಗಿರುವ ನಷ್ಟವನ್ನು ಸಹ ನಾವು ಭರ್ತಿ ಮಾಡಿಕೊಡುವುದಾಗಿ ತಿಳಿಸಿದ್ದೆವು ಎಂದರೆ ಸರಿಯಲ್ಲ.

3. ಚೆಕ್ ಅಮಾನ್ಯಗೊಂಡ ನಂತರ ನಾವು ಆರೋಪಿಗೆ ನೋಟಿಸ್ ನೀಡಿಲ್ಲ ಎಂದರೆ ಸರಿಯಲ್ಲ. ನಾವು ಕೆಲವೊಂದು ಸುಳ್ಳು ದಾಖಲೆ ಸೃಷ್ಟಿಮಾಡಿಕೊಂಡು ಹಾಜರು ಮಾಡಿದ್ದೇವೆ ಎಂದರೆ ಸರಿಯಲ್ಲ. ನಾವು ನ್ಯಾಯಾಲಯಕ್ಕೆ ತಪ್ಪು ಮಾಹಿತಿ ನೀಡಿ ಸುಳ್ಳು ದೂರು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ